## ನಿಮ್ಮೊಡನೆ

# ನಿಮ್ಮ 'ಆಧಾರ್' ಸುರಕ್ಷಿತವೆ?

ನಿಮ್ಮ ಮೊಬೈಲ್ ಫೋನ್ ನಂಬರ್‌ಗೆ ಆಧಾರ್ ಕಾರ್ಡ್ ಲಿಂಕ್ ಆಗಿದೆಯಾ? ಪಾನ್ ನಂಬರ್ ಪಡೆಯುವಾಗ ಆಧಾರ್ ಕಾರ್ಡ್ ಇಲ್ಲದೆ ಅರ್ಜಿ ಹಾಕುವಂತಿಲ್ಲ ನೋಡ್ರೀ; ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಮಾಡಿದ್ದೀರಾ? ಈ ಸಲ ಜೆಇಇ ಮುಖ್ಯ ಪರೀಕ್ಷೆಗೆ ಆಧಾರ್ ನಂಬರ್ ಕಡ್ಡಾಯ ನಮೂದಿಸಬೇಕು ಎಂದು ಸಿಬಿಎಸ್‌ಇ ಪರೀಕ್ಷಾ ಮಂಡಳಿ ಆದೇಶ ಹೊರಡಿಸಿದೆಯಂತೆ ಕಣ್ರೀ...!

–ಎಲ್ಲೆಡೆ ಈಗ ಆಧಾರ್ ಜ್ವರ ಹಬ್ಬಿದೆ. ಪ್ರತಿಯೊಂದು ಚಟುವಟಿಕೆಗಳಿಗೂ ಆಧಾರ್ ನಂಬರ್ ಕಡ್ಡಾಯ ಎಂದು ಸರ್ಕಾರ ಪದೇ ಪದೇ ಹೇಳುತ್ತಿದೆ. 2009ರ ಜನವರಿಯಲ್ಲಿ ಆಗಿನ ಕೇಂದ್ರ ಸರ್ಕಾರ ಆಧಾರ್ ಯೋಜನೆಯನ್ನು ಘೋಷಿಸಿದಾಗ, ಪ್ರತಿಪಕ್ಷದಲ್ಲಿದ್ದ ಈಗಿನ ಆಳುವ ಪಕ್ಷದ ನಾಯಕರೇ ಅದನ್ನು ಟೀಕಿಸಿದ್ದರು. 'ನಾವು ಅಧಿಕಾರಕ್ಕೆ ಬಂದರೆ ಆಧಾರ್ ಯೋಜನೆಯನ್ನೇ ರದ್ದುಗೊಳಿಸುತ್ತೇವೆ' ಎಂದು ಆಗ ಘೋಷಿಸಿದ್ದ ನಾಯಕರು ಈಗ ಮಂತ್ರಿಯಾಗಿದ್ದಾರೆ. ಎಲ್ಲ ರಾಜಕೀಯಗಳ ಹೊರತಾಗಿಯೂ ಆಧಾರ್ ಗಟ್ಟಿಯಾಗಿ ಉಳಿದುಕೊಂಡಿದೆ. ಮಾತ್ರವಲ್ಲ, ದಿನ ಕಳೆದಂತೆ ಹೆಚ್ಚು ಹೆಚ್ಚು ಮಹತ್ವ ಪಡೆದುಕೊಳ್ಳುತ್ತಿದೆ. ದೇಶದ ಜನರನ್ನು ಗುರುತಿಸುವ ನಿಟ್ಟಿನಲ್ಲಿ, ಅವರಿಗೆ ತಮ್ಮ ವ್ಯವಹಾರಗಳನ್ನು ನಡೆಸಲು ಅಧಿಕಾರ ನೀಡುವ ನಿಟ್ಟಿನಲ್ಲಿ ಆಧಾರ್ ಕಾರ್ಡ್ ಒಂದೇ ಮಾನದಂಡ ಎನ್ನುವಂತಹ ದಿನಗಳು ಶೀಘ್ರ ಬರಲಿವೆ.

ಒಬ್ಬ ವ್ಯಕ್ತಿಗೆ ಒಂದು ಗುರುತು ಎನ್ನುವುದು ಸರ್ಕಾರದ ಯೋಜನೆಗಳ ಅನುಷ್ಠಾನದ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯೇ. ಬ್ಯಾಂಕ್, ಅಂಚೆ ಕಚೇರಿ, ತಾಲ್ಲೂಕು ಕಚೇರಿ, ಶಿಕ್ಷಣ ಸಂಸ್ಥೆ, ಪ್ರಯಾಣ, ಆದಾಯ ತೆರಿಗೆ ಮುಂತಾಗಿ ಎಲ್ಲೆಡೆ, ಪ್ರಜೆಯ ಎಲ್ಲ ಚಟುವಟಿಕೆಗಳಿಗೂ ಆಧಾರ್ ಕಡ್ಡಾಯ ಮಾಡುವುದು ಒಳ್ಳೆಯದೇ. ಇಂತಹ ಒಂದು ಏಕೀಕೃತ ಕಾರ್ಡ್‌ನ ಅಗತ್ಯದ ಬಗ್ಗೆ ಯಾರಲ್ಲೂ ಭಿನ್ನಮತಗಳಿಲ್ಲ. ದೇಶದಲ್ಲಿ ಹೆಚ್ಚುತ್ತಿರುವ ಅಪರಾಧಗಳ ರಹಸ್ಯಗಳನ್ನು ಬಯಲಿಗೆಳೆಯಲೂ ಇಂತಹ ಕಾರ್ಡ್ ನೆರವಾಗುತ್ತದೆ. ಆದರೆ ಈ ಏಕೀಕೃತ ಕಾರ್ಡ್‌ನಲ್ಲಿ ನಮೂದಿಸಲಾಗುವ ಪ್ರಜೆಯ ವೈಯಕ್ತಿಕ ವಿವರಗಳನ್ನು ಆತನ ಅನುಮತಿ ಇಲ್ಲದೆ ಬೇರೆಯವರು ಕದ್ದು ಬಳಸಿದರೆ ಏನು ಮಾಡುವುದು? ಎನ್ನುವ ಭಯ ಮಾತ್ರ ಸಾರ್ವತ್ರಿಕವಾಗಿದೆ.

ಈ ಭಯಕ್ಕೆ ಇಂಬುಕೊಡುವಂತೆ ಅಪರಾಧ ಘಟನೆಗಳೂ ನಡೆದಿವೆ. ಈ ವರ್ಷದ ಫೆಬ್ರುವರಿಯಲ್ಲಿ ಟೆಲಿಕಾಂ ಸೇವಾ ಸಂಸ್ಥೆ ರಿಲಯನ್ಸ್ ಜಿಯೊದ ಆರು ನೌಕರರು, 'ಆಧಾರ್ ಕೇಂದ್ರ ಗುರುತುಗಳ ದತ್ತಾಂಶ ಸಂಗ್ರಹ' ದಿಂದ ಬೆರಳಚ್ಚುಗಳನ್ನು ಕದ್ದು ಸಿಮ್ ಕಾರ್ಡ್‌ಗಳನ್ನು ಆ್ಯಕ್ಟಿವೇಟ್ ಮಾಡಿ ಮಾರಿದ್ದು ಪತ್ತೆಯಾಗಿತ್ತು. ಇನ್ನೊಂದು ಪ್ರಕರಣದಲ್ಲಿ ಸುವಿಧಾ ಇನ್‌ಫೋಸರ್ವ್ ನ ನೌಕರನೊಬ್ಬನ ವಿರುದ್ಧ ಯುಐಡಿಎಐ ನ ಅಧಿಕಾರಿಗಳು ನೀಡಿದ ದೂರಿನ ಪ್ರಕಾರ, ಆ್ಯಕ್ಸಿಸ್ ಬ್ಯಾಂಕ್ ಗೇಟ್‌ವೇನಿಂದ ಗ್ರಾಹಕರ ಆಧಾರ್ ಮಾಹಿತಿಗಳನ್ನು ಬಳಸಿ ಸುಮಾರು 400 ಬ್ಯಾಂಕ್ ವ್ಯವಹಾರಗಳನ್ನು ನಡೆಸಿದ್ದು ಪತ್ತೆಯಾಗಿದೆ. ಕಳೆದ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ಅಭಿನವ್ ಶ್ರೀವಾಸ್ತವ ಎನ್ನುವ ಐಟಿ ನೌಕರನೊಬ್ಬನನ್ನು ಆಧಾರ್ ದತ್ತಾಂಶಗಳ ಕಳವಿಗಾಗಿ ಪೊಲೀಸರು ಬಂಧಿಸಿದ್ದರು. ಆತ ಈ ಆಧಾರ್ ದತ್ತಾಂಶಗಳನ್ನು ನ್ಯಾಷನಲ್ ಇನ್‌ಫಾರ್ಮಟಿಕ್ಸ್ ಸೆಂಟರ್‌ನ ಇ– ಹಾಸ್ಪಿಟಲ್ ಸರ್ವರ್‌ನಿಂದ ಎಗರಿಸಿದ್ದ! ಇಂತಹ ಘಟನೆಗಳು ಸ್ಪಷ್ಟ ಪಡಿಸುವ ಅಂಶವೆಂದರೆ, ನಮ್ಮ ಆಧಾರ್ ಮಾಹಿತಿಗಳನ್ನು ಯಾರು ಬೇಕಾದರೂ ಕದಿಯಬಹುದು! 'ಹ್ಯಾಕರ್'ಗಳಿಗೆ ನಮ್ಮ ಆಧಾರ್ ಸಂಗ್ರಹ ವ್ಯವಸ್ಥೆ ಸುಲಭ ತುತ್ತಾಗಿದೆ.

ಬೆರಳಚ್ಚುಗಳನ್ನು ನಕಲು ಮಾಡುವುದಕ್ಕೂ ಈಗ ಹ್ಯಾಕರ್‌ಗಳಿಗೆ ಹೆಚ್ಚಿನ ಕಷ್ಟವೇನೂ ಆಗುವುದಿಲ್ಲ. ಕೇವಲ 500 ಡಾಲರ್‌ಗಳಷ್ಟು ಕಡಿಮೆ ವೆಚ್ಚದಲ್ಲಿ ಬೆರಳಚ್ಚುಗಳನ್ನು ನಕಲು ಮಾಡಬಹುದು ಎಂದು ಅಮೆರಿಕದ ಮಿಚಿಗನ್ ಸ್ಟೇಟ್ ಯೂನಿವರ್ಸಿಟಿಯ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ಇಲಾಖೆ ನಡೆಸಿದ ಇತ್ತೀಚಿನ ಅಧ್ಯಯನವೊಂದು ಬಹಿರಂಗಪಡಿಸಿದೆ. ಅಮೆರಿಕದ ಗ್ರಾಹಕ ರಕ್ಷಣೆಯ ಫೆಡರಲ್ ನಿಯಂತ್ರಕ ಸಂಸ್ಥೆಯು ಕಂಡುಕೊಂಡ ಪ್ರಕಾರ, ಅಮೆರಿಕದಲ್ಲಿ ಶೇಕಡಾ 7ರಷ್ಟು ಜನರು ಈ ರೀತಿ ತಮ್ಮ ಐಡೆಂಟಿಟಿ ಬಹಿರಂಗಗೊಂಡಿದೆ ಎಂದು ಒಪ್ಪಿಕೊಂಡಿದ್ದಾರೆ. ಅಂದರೆ ಅಮೆರಿಕದಂತಹ ಸೈಬರ್ ಭದ್ರತೆ ಬಿಗಿಯಾಗಿರುವ ದೇಶದಲ್ಲೂ ವಿಶಿಷ್ಟ ಗುರುತಿನ ಕಾರ್ಡ್ ಸೂಕ್ತ ರಕ್ಷಣೆ ಹೊಂದಿಲ್ಲ ಎನ್ನುವುದು ಸ್ಪಷ್ಟ.

ಆಧಾರ್ ಮಾಹಿತಿಗಳ ಸುರಕ್ಷೆಗೆ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಸರ್ಕಾರ, ತಂತ್ರಜ್ಞಾನದ ಸುಭದ್ರತೆಯ ಭರವಸೆಯನ್ನು ಜನರಲ್ಲಿ ಮೂಡಿಸಬೇಕಿದೆ. ಹಾಗೆಯೇ ಜನರು ಕೂಡಾ ತಮ್ಮ ಆರ್ಥಿಕ ವಹಿವಾಟುಗಳ ಬಗ್ಗೆ, ಪಾಸ್‌ವರ್ಡ್‌ಗಳ ಬಳಕೆ ಬಗ್ಗೆ ಅತೀವ ಮುನ್ನೆಚ್ಚರಿಕೆಯನ್ನು ವಹಿಸಬೇಕಿದೆ. ಗ್ರಾಹಕರ ಆಧಾರ್‌ನ ಮಾಹಿತಿ ಸೋರಿಕೆಯಾದಲ್ಲಿ ಇಡೀ ಬ್ಯಾಂಕಿಂಗ್ ವ್ಯವಸ್ಥೆಯೇ ಅಲ್ಲೋಲ ಕಲ್ಲೋಲವಾಗುವ ಸಂಭವವಿದೆ.

■ ಬಿ.ಎಂ.ಹನೀಫ್

ಎಲ್ಲೆಡೆ, ಪ್ರಜೆಯ ಎಲ್ಲ ಚಟುವಟಿಕೆಗಳಿಗೂ ಆಧಾರ್ ಕಡ್ಡಾಯ ಮಾಡುವುದು ಒಳ್ಳೆಯದೇ. ಇಂತಹ ಒಂದು ಏಕೀಕೃತ ಕಾರ್ಡ್‌ನ ಅಗತ್ಯದ ಬಗ್ಗೆ ಯಾರಲ್ಲೂ ಭಿನ್ನಮತಗಳಿಲ್ಲ. ದೇಶದಲ್ಲಿ ಹೆಚ್ಚುತ್ತಿರುವ ಅಪರಾಧಗಳ ರಹಸ್ಯಗಳನ್ನು ಬಯಲಿಗೆಳೆಯಲೂ ಇಂತಹ ಕಾರ್ಡ್ ನೆರವಾಗುತ್ತದೆ. ಆದರೆ ಈ ಏಕೀಕೃತ ಕಾರ್ಡ್‌ನಲ್ಲಿ ನಮೂದಿಸಲಾಗುವ ಪ್ರಜೆಯ ವೈಯಕ್ತಿಕ ವಿವರಗಳನ್ನು ಆತನ ಅನುಮತಿ ಇಲ್ಲದೆ ಬೇರೆಯವರು ಕದ್ದು ಬಳಸಿದರೆ ಏನು ಮಾಡುವುದು?

